ವಿ-92-(125)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಾಂತರಾಜ್ (ಬಿಎಂಎಲ್) ಇವರ ನಿಯಮ 72ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ:125 ಕ್ಕೆ ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಹೇಳಿಕೆ.**

ವಿಷಯ:- ಚಿಕ್ಕಬಳ್ಳಾಪುರ ನಗರದ ಹೃದಯ ಭಾಗದಲ್ಲಿರುವ ಜೂನಿಯರ್ ಕಾಲೇಜು ಹತ್ತಿರವಿರುವ ಹೈ ವೋಲ್ಟೇಜ್ ವಿದ್ಯುತ್ ಗೋಪುರವನ್ನು ತೆರವುಗೊಳಿಸುವ ವಿಷಯದ ಬಗ್ಗೆ.

*****

ಚಿಕ್ಕಬಳ್ಳಾಪುರ ನಗರದ ಹೃದಯ ಭಾಗದಲ್ಲಿ ಜೂನಿಯರ್ ಕಾಲೇಜು, ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣ, ನ್ಯೂ ಹಾರಿಜನ್ ಹೈಸ್ಕೂಲ್, ಪೂರ್ಣಪ್ರಜ್ಞ ಹೈ ಸ್ಕೂಲ್, ಪ್ರಖ್ಯಾತ ಶನಿಮಹಾತ್ಮ ದೇವಾಲಯ, ರೈಲ್ವೆ ಸ್ಟೇಷನ್ ಹಾಗೂ ಚಾಮರಾಜಪೇಟೆ ಇವುಗಳ ಮೇಲೆ ಹಾದು ಹೋಗಿರುವ ವಿದ್ಯುತ್ ಮಾರ್ಗವು ಚಿಕ್ಕಬಳ್ಳಾಪುರ ಕೈಗಾರಿಕ ಪ್ರದೇಶ ವಿದ್ಯುತ್ ಉಪಕೇಂದ್ರದಿಂದ ಚಿಕ್ಕಬಳ್ಳಾಪುರ ನಗರ ಉಪಕೇಂದ್ರಕ್ಕೆ ಮೇಲೆ ಹಾದು ಹೋಗುವ 66 ಕೆ.ವಿ ವಿದ್ಯುತ್ ಮಾರ್ಗವಾಗಿರುತ್ತದೆ. ಸದರಿ ಮೇಲೆ ಹಾದು ಹೋಗುವ 66 ಕೆ.ವಿ ವಿದ್ಯುತ್ ಮಾರ್ಗವನ್ನು 2001 ರ ವರ್ಷದಲ್ಲಿ ಸಿ.ಇ.ಎ ಸುರಕ್ಷತಾ ಕಾಯ್ದೆಯನ್ವಯ ನಿರ್ಮಾಣ ಮಾಡಿ ಚಾಲನೆಗೊಳಿಸಲಾಗಿರುತ್ತದೆ. ಪೂರ್ಣಪ್ರಜ್ಞ ಶಾಲೆಯ ಕಟ್ಟಡವನ್ನು 2009ನೇ ವರ್ಷದಲ್ಲಿ ಸದರಿ ಮಾರ್ಗದಡಿಯಲ್ಲಿ ನಿಯಮ ಬಾಹಿರವಾಗಿ ನೆಲಮಹಡಿಯನ್ನು ನಿರ್ಮಿಸಿರುತ್ತಾರೆ.

ಚಿಕ್ಕಬಳ್ಳಾಪುರ ಕೈಗಾರಿಕ ಪ್ರದೇಶ ವಿದ್ಯುತ್ ಉಪಕೇಂದ್ರದಿಂದ ಚಿಕ್ಕಬಳ್ಳಾಪುರ ನಗರ ಉಪಕೇಂದ್ರಕ್ಕೆ ಮೇಲೆ ಹಾದು ಹೋಗುವ 66 ಕೆ.ವಿ ವಿದ್ಯುತ್ ಮಾರ್ಗವನ್ನು ದಿನಾಂಕ:27-01-2013 ರಂದು ನವೀಕರಣಗೊಳಿಸಿ, DC Narrow based KPTCL design towers ಗಳನ್ನು ಬಳಸಿ ನಿರ್ಮಿಸಲಾಗಿರುತ್ತದೆ. ಸದರಿ ಮಾರ್ಗದ ನವೀಕರಣದ ನಂತರ, ಪೂರ್ಣಪ್ರಜ್ಞ ಶಾಲೆಯ ಕಟ್ಟಡದ ನವೀಕರಣದ ಸಮಯದಲ್ಲಿ ಮೊದಲನೆ ಮಹಡಿಯನ್ನು ನಿರ್ಮಿಸಿರುವ ಕಾರಣ, ನಿಗದಿತ ಅಂತರ ಕಡಿಮೆಯಾಗಿರುತ್ತದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:23-10-2019 ಮತ್ತು 04-12-2021 ರಂದು ಶಾಲೆಗೆ ನೋಟೀಸ್ ನೀಡಲಾಗಿರುತ್ತದೆ.

ಪೂರ್ಣಪ್ರಜ್ಞ ಹೈ ಸ್ಕೂಲ್ ಹೊರತುಪಡಿಸಿ, ಈ ಮೇಲೆ ತಿಳಿಸಿದ ಎಲ್ಲಾ ಸ್ಥಳಗಳಲ್ಲಿ ಸಿ.ಇ.ಎ ಸುರಕ್ಷತಾ ಕಾಯ್ದೆ ಪ್ರಕಾರವಾಗಿ ನಿಗದಿತ ಅಂತರವಿರುತ್ತದೆ. ಈ ಮಾರ್ಗವು ನವೀಕರಣಗೊಂಡು ಸಂಪೂರ್ಣ ಸುಸ್ಥಿತಿಯಲ್ಲಿರುವ ಕಾರಣ ಯಾವುದೇ ಅನಾಹುತ ಹಾಗೂ ಅಪಾಯದ ಸಂಭವವಿರುವುದಿಲ್ಲ.

ಸಂಖ್ಯೆ: ಎನರ್ಜಿ 285 ಇಬಿಎಸ್ 2021

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ
ಸಚಿವರು